ಮಂಡಿಸುವಂತಹ ಸನ್ನಿವೇಶವನ್ನು ಇದೇ ಪ್ರಥಮ ಬಾರಿಗೆ ಪ್ರಸಾರ ಮಾಡಲು ದೂರದರ್ಶನದವರಿಗೆ ಅನುಮತಿ ನೀಡಿಲಾಗಿತ್ತು. ಆಯವ್ಯಯದಲ್ಲಿನ ವಿಷಯಗಳು ಸಾರ್ವಜನಿಕರಿಗೆ ತಿಳಿಯಬೇಕೆಂಬ ಉದ್ದೇಶದಿಂದಾಗಿ ದೂರದರ್ಶನದವರು ಹೆಚ್ಚಾಗಿ ಉಪ ಮುಖ್ಯಮಂತ್ರಿಯವರನ್ನೇ ಕೇಂದ್ರೀಕರಿಸಿ ಪ್ರಸಾರ ಮಾಡಿರುತ್ತಾರೆ. ಹೀಗಾಗಿ ಬೆಂಗಳೂರು ದೂರದರ್ಶನದವರು ಸದನದ ಇತರ ಸದಸ್ಯರ ಕಡೆಗೆ ಬಹುಶಃ ಗಮನಹರಿಸಿರುವುದಿಲ್ಲ.

ಸದನದ ಕಾರ್ಯಕಲಾಪಗಳಲ್ಲಿ ಯಾವುದೇ ಸದಸ್ಯರು ಭಾಗವಹಿಸಿದಂಥ ಸಂದರ್ಭವನ್ನು ದೂರದರ್ಶನವಾಗಲಿ, ಆಕಾಶವಾಣಿಯಾಗಲಿ ಅಥವಾ ಇತರೆ ಪತ್ರಿಕಾ ಮಾಧ್ಯಮದವರಾಗಲೀ ಪ್ರಸಾರ ಮಾಡದೇ ಇರದಿದ್ದಲ್ಲಿ ಅದು ಹಕ್ಕುಚ್ಯುತಿ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಕೋದಂಡರಾಮಯ್ಯನವರದ್ದು ಏನಾಯಿತು ಸ್ವಾಮಿ?

ಅಧ್ಯಕ್ಷರು: ಅದು ಇನ್ನೂ ತೀರ್ಮಾನವಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್: ಅದನ್ನು ಯಾವಾಗ ಮಾಡುತ್ತೀರಿ?

ಅಧ್ಯಕ್ಷರು: ಟೈಮ್ ಕೊಡಿ.

(11) ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹತ್ತನೇ ವಿಧಾನ ಸಭೆಯ ಆರನೇ ಮುಂದುವರೆದ ಉಪವೇಶನವು ಇಲ್ಲಿಯವರೆಗೆ ನಡೆಸಿದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಸಭೆಯ ಮುಂದೆ ಮಂಡಿಸ ಬಯಸುತ್ತೇನೆ.

ಸೋಮವಾರ, ದಿನಾಂಕ 28ನೇ ಜುಲೈ, 1997ರಂದು ಪ್ರಾರಂಭವಾದ ಆರನೇ ಮುಂದವರೆದ ಉಪವೇಶನವು 30 ದಿನಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿತು.

ಸದನವು 197.36 ಗಂಟೆಗಳ ಕಾಲ ಕಾರ್ಯಕಲಾಪಗಳನ್ನು ನಡೆಸಿರುತ್ತದೆ.

ಇತ್ತೀಚೆಗೆ ನಿಧನರಾದ 13 ಗಣ್ಯರುಗಳ ಗೌರವಾರ್ಥ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಯಿತು.

ಈ ಅವಧಿಯಲ್ಲಿ 2242 ಪ್ರಶ್ನೆಗಳನ್ನು ಸ್ವೀಕರಿಸಿದ್ದು, 345 ಚುಕ್ಕೆ ಗುರ್ತಿನ ಪ್ರಶ್ನೆಗಳಾಗಿ ಹಾಗೂ 1555 ಪ್ರಶ್ನೆಗಳು ಚುಕ್ಕೆ ರಹಿತ ಪ್ರಶ್ನೆಯಾಗಿಯೂ ಅಂಗೀಕಾರವಾಗಿರುತ್ತದೆ.

ಎರಡು ಅಲ್ಪ ಕಾಲಾವಧಿ ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು ಅದರಲ್ಲಿ ಒಂದು ಪ್ರಶ್ನೆಗೆ ಉತ್ತರವನ್ನು ನೀಡಲಾಯಿತು.

138 ಗಮನ ಸೆಳೆಯುವ ಸೂಚನೆಗಳನ್ನು ಸ್ವೀಕರಿಸಿ, ಆ ಪೈಕಿ 25 ಸೂಚನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹೇಳಿಕೆಗಳನ್ನು ನೀಡಿರುತ್ತಾರೆ.

ಅರ್ಧಗಂಟೆ ಕಾಲಾವಧಿ ಚರ್ಚೆಗೆ 5 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 4 ಸೂಚನೆಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ನಿಯಮ 351ರ ಅಡಿಯಲ್ಲಿ 196 ಸೂಚನೆಗಳನ್ನು ಸ್ವೀಕರಿಸಲಾಗಿದ್ದು ಅವುಗಳಲ್ಲಿ ಯಾವ ಸೂಚನೆಯನ್ನು ಸದನದಲ್ಲಿ ಪ್ರಸ್ತಾಪಿಸಲು ತೆಗೆದುಕೊಂಡಿರುವುದಿಲ್ಲ. ಆದರೂ ಸರ್ಕಾರದಿಂದ ಉತ್ತರಗಳನ್ನು ತರಿಸಿ ಸದಸ್ಯರಿಗೆ ಒದಗಿಸಲಾಗಿದೆ.

4 ಖಾಸಗಿ ನಿರ್ಣಯಗಳನ್ನು ಸ್ವೀಕರಿಸಿದ್ದು, ಅವುಗಳಲ್ಲಿ ಯಾವುದನ್ನೂ ಚರ್ಚೆಗೆ ತೆಗೆದುಕೊಂಡಿರುವುದಿಲ್ಲ.

ಈ ಅವಧಿಯಲ್ಲಿ 178 ಕಾಗದ ಪತ್ರಗಳನ್ನು ಸದನದ ಮುಂದೆ ಮಂಡಿಸಲಾಯಿತು.

ನಿಯಮ 69ರ ಅಡಿಯಲ್ಲಿ 33 ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳಲ್ಲಿ 5 ಪ್ರಸ್ತಾವನೆಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ 13 ದಿನಗಳು ಚರ್ಚೆ ನಡೆಸಿ ದಿನಾಂಕ 4.9.1997ರಂದು ಮಾನ್ಯ ಮುಖ್ಯ ಮಂತ್ರಿಯವರು ಉತ್ತರಿಸಿದ ನಂತರ ಅನುದಾನ ಬೇಡಿಕೆಗಳ ಮೇಲಿನ ಪ್ರಸ್ತಾವನೆಯನ್ನು ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

ನಿಲುವಳಿ ಸೂಚನೆಗೆ 16 ಪ್ರಸ್ತಾವನೆಗಳು ಬಂದಿದ್ದು ಅವುಗಳಿಗೆ ಅನುಮತಿಯನ್ನು ತಡೆಹಿಡಿಯಲಾಯಿತು.

ಈ ಅವಧಿಯಲ್ಲಿ ಒಟ್ಟು 21 ವಿಧೇಯಕಗಳನ್ನು ಸದನದಲ್ಲಿ ಮಂಡಿಸಲಾಯಿತು. ಇದೇ ಅವಧಿಯಲ್ಲಿ 6 ಹಳೆಯ ವಿಧೇಯಕಗಳನ್ನೊಳಗೊಂಡಂತೆ ಒಟ್ಟು 18 ವಿಧೇಯಕಗಳನ್ನು ಪರ್ಯಾಲೋಚಿಸಿ ಅಂಗೀಕರಿಸಲಾಯಿತು. ವಿಧಾನ ಪರಿಷತ್ತಿನಿಂದ ಅಂಗೀಕಾರ ರೂಪದಲ್ಲಿದ್ದ ಎರಡು ವಿಧೇಯಕಗಳನ್ನು ಪರ್ಯಾಲೋಚಿಸಿ ಅಂಗೀಕರಿಸಲಾಯಿತು.

ಈ ಅಧಿವೇಶನದ ಅವಧಿಯಲ್ಲಿ ಖಾಸಗಿ ಸದಸ್ಯರುಗಳ ವಿಧೇಯಕಗಳು ಹಾಗೂ ನಿರ್ಣಯಗಳ ಸಮಿತಿಯ ಒಂದು ವರದಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಒಂದು ವಿಶೇಷ ವರದಿ ಹಾಗೂ 8 ಸ್ಥಾಯಿ ಸಮಿತಿಗಳ ವರದಿಗಳನ್ನು ಸದನದಲ್ಲಿ ಮಂಡಿಸಲಾಯಿತು.

1987-88 ಹಾಗೂ 1988-89ನೇ ಸಾಲುಗಳ ಹೆಚ್ಚುವರಿ ಅನುದಾನ ಬೇಡಿಕೆಗಳನ್ನು

ಸಭೆಯ ಮತಕ್ಕೆ ಹಾಕಿ ಅಂಗೀಕರಿಸಲಾಯಿತು. 1997-98ನೇ ಸಾಲಿನ ಪೂರಕ ಅಂದಾಜುಗಳ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸುಲಲಿತವಾಗಿ ನಡೆಸಲು ನನ್ನೊಡನೆ ಸಹಕರಿಸಿದ ಈ ಸದನದ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿಗೂ, ವಿರೋಧ ಪಕ್ಷದ ನಾಯಕರಿಗೂ, ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರಿಗೂ ಪತ್ರಕರ್ತರಿಗೂ, ಆಕಾಶವಾಣಿ ಮತ್ತು ದೂರದರ್ಶನದವರಿಗೂ ವಿವಿಧ ಇಲಾಖಾ ಅಧಿಕಾರಿಗಳು ಹಾಗೂ ವಿಧಾನ ಮಂಡಲದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಇಡೀ ಸದನದ ಅಧಿವೇಶನ ನಡೆಯುವ ವೇಳೆಯಲ್ಲಿ ಎರಡೇ ಎರಡು ಸಂದರ್ಭಗಳಲ್ಲಿ ಮಾತ್ರ ನಾನು ಸ್ವಲ್ಪ ಸ್ಥಿಮಿತವನ್ನು ಕಳೆದುಕೊಂಡು ಸಿಟ್ಟಿಗೆದ್ದಿದ್ದೆ. ಅದೂಕೂಡ ಯಾರ ಮೇಲೆ ಪೂರ್ವಗ್ರಹಪೀಡಿತನಾಗಿ ಆಗಲಿ, ಮತ್ಸರದಿಂದಾಗಲೀ, ದ್ವೇಷದಿಂದಾಗಲೀ ಅಲ್ಲ. ಸಮಯವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿ ಅದರಿಂದ ಯಾರದೇ ಸದಸ್ಯರ ಮನಸ್ಸಿಗೆ ನೋವಾಗಿದ್ದರೂ ಬೇಸರಪಟ್ಟುಕೊಳ್ಳಬಾರದು ಎನ್ನುವ ಮಾತನ್ನುಹೇಳಿ ಈ ರೀತಿ ಹೆಚ್ಚು ಉಪಯುಕ್ತವಾದ ಕೆಲಸವನ್ನು ಮಾಡಿರುವುದಕ್ಕೆ ಸಹಕರಿಸಿದ ತಮ್ಮೆಲ್ಲರನ್ನೂ ಕೂಡ ಅಭಿನಂದಿಸಿ ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ ಎಂದು ತಿಳಿಸುತ್ತಿದ್ದೇನೆ.

(ಸದನವು ರಾತ್ರಿ 8.35 ಘಂಟೆಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)